ಒಂದಂ ಪೋಲೀಸ್ ಪಡೆಯನ್ನು ಅಲ್ಲಿಗೆ ನೇಮಿಸಿ ಗಸ್ತು ನಡೆಸಲಾಗುತ್ತಿದೆ. ಈಗ ಪರಿಸ್ಥಿತಿ ಶಾಂತಿಯುತವಾಗಿದೆ ಎಂದು ವರದಿಯಾಗಿದೆ.

ಶ್ರೀ ಜಿ.ಕೆ. ಸುಬ್ಬಯ್ಯ (ವಿರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾನ್ಯ ಸಚಿವರು ಇಂಗ್ಲಿಷ್‌ನಲ್ಲಿ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಮಲೆಯಾಳಿ ಕುಟುಂಬಕ್ಕೆ ಸೇರಿದ ಮೋಹನ್, ಚಂದ್ರು, ರವಿ ಮತ್ತು ಸತ್ಯ ಎನ್ನುವವರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು ಎಂದು ಹೇಳಿದ್ದಾರೆ. ಇದರ ಕೆಳಗೆ ಏನು ಬರೆದಿದ್ದಾರೆಂದರೆ, ಒನೇ ತಾರೀಖು ಇವರ ಕೊಲೆ ಆಯಿತು ಎಂದೂ, ಈ ೩೦ ಕುಟುಂಬಗಳೂ ಇದ್ದುದು ಸರ್ಕಾರದ ಜಾಗದಲ್ಲಿ ಎಂದು ತಿಳಿಸಿದ್ದಾರೆ ಈ ಕುಟುಂಬಗಳು ಇದ್ದುದು ಸರ್ಕಾರದ ಜಾಗ ಆಗಿದ್ದರೆ ಅಲ್ಲಿ ಅವರು ಬಗರ್ ಹುಕುಂನಿಂದ ಮನೆ ಕಟ್ಟಿಕೊಂಡಿರುವುದಕ್ಕೆ ಯಾರು ಅವಕಾಶವನ್ನು ಕೊಟ್ಟರು? ಈ ಹಿಂದೆ ಎಷ್ಟು ಸಮಯದಿಂದ ಈ ಜನರು ಅಲ್ಲಿದ್ದರು? ಆ ದಾರಿಯನ್ನು ಇವರು ಮೊದಲು ಉಪಯೋಗಿಸುತ್ತಿದ್ದರೇ? ಅಥವಾ ಆ ದಿವಸ ಮಾತ್ರ ಇವರು ಆ ದಾರಿಯನ್ನು ತಡೆಗಟ್ಟುವುದಕ್ಕೆ ಕಾರಣ ಏನು? ಇನ್ನೂ ಮುಂತಾದ ವಿವರಗಳು ಸರಿಯಾಗಿಲ್ಲ ಇಲ್ಲಿ ಏನು ಹೇಳ ತ್ರಿದ್ದೀರಿ ಎಂದರೆ ಒಂದು ಕಡೆ ಅರಣ್ಯ ಭೂಮಿ, ಇನ್ನೊಂದು ಕಡೆ ಪೈಸಾರಿ ಎಂದು ಹೇಳುತ್ತಿದ್ದೀರಿ ಇದು ಪೈಸಾರಿ ಆಗಿದ್ದರೆ ರೆವಿನ್ಯೂ ಅಧಿಕಾರಿಗಳು ಏನು ಮಾಡುತ್ತಿದ್ದರು? ಈ ಜಾಗ ಅರಣ್ಯ ಪ್ರದೇಶ ಆಗಿದ್ದರೆ ಆ ಜನರು ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಿಮ್ಮ ಅರಣ್ಯ ಅಧಿಕಾರಿಗಳು ಹೇಗೆ ಅವಕಾಶವನ್ನು ಕೊಟ್ಟರು? ಇದರ ಬಗ್ಗೆ ತಾವು ವಿವರವಾಗಿ ತಿಳಿಸಬೇಕು.

ಶ್ರೀ ವೈ. ರಾಮಕೃಷ್ಣ,—ಇದು ಇಬ್ಬರು ಖಾಸಗೀ ವ್ಯಕ್ತಿಗಳ ನಡುವೆ ನಡೆದಂಥ ಜಗಳ, ಇದರಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ. ೩೦ ಕುಟುಂಬಗಳು ಅಲ್ಲಿ ನೆಲೆಸಿದ್ದುವು ಎಂದು ನಾನು ಈ ಮೊದಲೇ ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ. ಆದರೆ ಈ ವಿಷಯ ಕೋರ್ಟಿನ ಮುಂದೆ ಇರುವುದರಿಂದ ಈಗ ಇದರ ಬಗ್ಗೆ ಇಷ್ಟೆ ಮಾತನಾಡುವುದು ಸರಿಯಲ್ಲ.

(ii) Heavy Demand made for admission to I.T.I. Bangalore

SRI A. B. JAKANUR (Minister for Labour) —The total number of seats available for admission at the Industrial Training Institute, Bangalore is 376. About 10,000 applications have been received against 376 seats. As the cost involved is very huge for conducting the entrance test for all the applicants, a procedure has been evolved for selecting candidates for the entrance test. According to that procedure 4 applicants for each seat will be called for to appear for the entrance test in all categories strictly on merit. On the basis of the result of the entrance test two successful candidates for each seat will be called for interview on the basis of merit in all categories. The final selection willbe made on the bas s of marks obtained in the entrance test and the marks awarded by the Committee during interview of the candidates.

The lists are prepared tradewise right from the beginning on the basis of Trade indicated by applicants at first choice in the applications.

The conducting of entrance test is as good and as lawful as any other process of elimination adopted for selecting candidates when large number of applications are received for limited seats. As the

Principal of merit is applied even among applicants of reserved categories after picking up general merit pool in the order of merit (which includes applicant belonging to all categories) the interest of reserved category applicants is also safeguarded.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಸ್ವಾಮಿ, ಬೆಂಗಳೂರಿನಲ್ಲಿ ಈ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ೩೭೬ ಪ್ರೈವೇಟ್ ಸೀಟ್ಸ್ ಇವೆ. ಇವಕ್ಕೆ ೧೦ ಸಾವಿರ ಅರ್ಜಿಗಳು ಬಂದಿದ್ದುವು ಎಂದು ಹೇಳಿದ್ದಿರಿ ಆದರೆ ಇದೇ ಬೆಂಗಳೂರಿನಲ್ಲಿರತ್ಕ ಎಸ್, ಜೆ. ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಇವುಗಳಲ್ಲಿ ಸೀಟುಗಳನ್ನು ಕೊಡುವಾಗ ಈ ರೀತಿ ಸಂದರ್ಶನ ಮಾಡುವುದಿಲ್ಲ ಆದರೆ ಈ ಕೈಗಾರಿಕಾ ತರಬೇತಿ ಸಂಸ್ಥೆ ಒಂದರಲ್ಲಿ ಮಾತ್ರ ಆಯ್ಕೆಗೆ ಮುಂಚೆ ರಿಟನ್ ಟೆಸ್ಟ್ ಮತ್ತು ಓರಲ್ ಟೆಸ್ಟ್ ಗಳನ್ನು ಮಾಡುವುದರ ಆವಶ್ಯಕತೆಯಾದರೂ ಏನಿದೆ ? ಇದನ್ನು ಮೆರಿಟ್ ಮೇಲೆ ಕೊಡುತ್ತೇವೆಂದು ತಾವು ಏನು ಹೇಳುತ್ತಿದ್ದೀರಿ, ಅದರ ಪ್ರಕಾರ ಮೆರಿಟ್ ಮೇಲೆಯೇ ಸೀಟುಗಳನ್ನು ಕೊಡುವುದಕ್ಕೆ ನಿಮಗಿರತಕ್ಕ ತೊಂದರೆಯಾದರೂ ಏನು? ಹಾಗಾದರೆ ಈ ಟೆಸ್ಟ್‌ಗಳನ್ನು ಏತಕ್ಕೆ ಮಾಡುತ್ತೀರಿ ?

ಇನ್ನು ಎರಡನೆಯದಾಗಿ ರಿಟನ್ ಟೆಸ್ಟ್ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಹಾಗಾದರೆ ಅತ್ಯಂತ ದೊಡ್ಡ ದೊಡ್ಡ ಪ್ರೊಫೆಷನಲ್ ಕೋರ್ಸ್‌ಗಳಿಗೂ ಈ ರೀತಿ ರಿಟನ್ ಎಕ್ಸಾಮಿನೇಷನ್ ಏತಕ್ಕೆ ಮಾಡುತ್ತಿಲ್ಲ. ನೀವು ಇಲ್ಲಿ ಏನು ಮಾಡುತ್ತಿದ್ದೀರಿ ಎಂದರೆ ರಿಟನ್ ಎಕ್ಸಾಮಿನೇಷನ್ ಎಂದು ಇಟ್ಟು ಅದಕ್ಕೆ ೩೦ ಅಂಕಗಳನ್ನು ನಿಗದಿಪಡಿಸಿ ಅದರ ಮೂಲಕ ಮಾರ್ಕ್ಸ್‌ನ ಪ್ಯಾಪಾರ ಮಾಡಿಕೊಳ್ಳುವುದಕ್ಕೆ ಕೆಲವರಿಗೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಎಸ್ ಎಸ್.ಎಲ್ ಸಿ.ಯಲ್ಲಿ ೬೦ ಪರ್ಸೆಂಟ್ ತೆಗೆದುಕೊಂಡ ವಿದ್ಯಾರ್ಥಿಗೆ ರಿಟನ್ ಎಕ್ಸಾಮಿನೇಷನ್‌ನಲ್ಲಿ ೩೦ ಮಾರ್ಕ್ಸ್‌ಗೆ ೧೦ ಅಂಕಗಳನ್ನು ಮಾತ್ರ ಕೊಟ್ಟಿದ್ದಾರೆ. ಆದೇ ಎಸ್. ಎಸ್. ಎಲ್ ಸಿ.ಯಲ್ಲಿ ೪೦ ಪರ್ಸೆಂಟ್ ತೆಗೆದುಕೊಂಡ ವಿದ್ಯಾರ್ಥಿಗೆ ೩೦ಕ್ಕೆ ೩೦ ಮಾರ್ಕ್ಸ್‌ನ್ನೂ ಕೊಟ್ಟಿದ್ದಾರೆ. ಇದರಿಂದ ಮೆರಿಟ್ ಇದ್ದಂಥ ವಿದ್ಯಾರ್ಥಿಗಳನ್ನು ಎಲಿಮಿನೇಟ್ ಮಾಡುವುದಕ್ಕೆ ತಾವು ಒಂದು ದಾರಿಯನ್ನು ಮಾಡಿಕೊಟ್ಟಂತಾಗಿದೆ

ಇನ್ನು ಮೂರನೆಯದಾಗಿ ಈ ಓರಲ್ ಟೆಸ್ಟನ್ನು ಏತಕ್ಕೆ ಇಡುತ್ತೀರಿ ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ ಹೊನ್ನೆ ಒಬ್ಬ ಇಂಜಿನಿಯರಿಂಗ್ ಪದವೀಧರ ಒಂದುಕಡೆ ಇಂಟರ್‌ವ್ಯೂಗೆ ಹೋದ. ಅಲ್ಲಿ ಏನು ನಡೆಯಿತು ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾನೆ. ಅಲ್ಲಿಗೆ ಒಬ್ಬ ಮೆಂಬರ್ ಬಂದು ಕುಳಿತರಂತೆ. ನಂತರ ಈತನನ್ನು ಕುರಿತು ನೀನು ಶಿವಗಂಗೆ ಬೆಟ್ಟವನ್ನು ನಾಲ್ಕು ಕಡೆಗಳಿಂದಲೂ ನೋಡಿದ್ದೀಯಾ ನೋಡಿದ್ದರೆ ಅದು ಯಾವ ರೀತಿ ಕಾಣಿಸುತ್ತದೆ ಎಂದು ಕೇಳಿದರಂತೆ. ಪಾಪ ಈ ಇಂಜಿನೀಯರಿಂಗ್ ಪದವೀಧರ ಆ ವಾರದ ಸುಧಾ ವಾರಪತ್ರಿಕೆಯನ್ನು ಓದಿರಲಿಲ್ಲ. ಆದರೆ ಶಿವತ್ತು ಆ ಮೆಂಬರ್ ಸುಧಾ ವಾರಪತ್ರಿಕೆಯನ್ನು ಓದಿಕೊಂಡು ಹೋಗಿದ್ದಾನೆ. ಅಂದರೆ ಈ ರೀತಿ ಒಂದಕ್ಕೊಂದು ಸಂಬಂಧವಿಲ್ಲದಿರತಕ್ಕ ಪ್ರಶ್ನೆಗಳನ್ನು ಕೇಳುತ್ತಾರೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಇಂಥ ಒಂದು ಮೌಖಿಕ ಪರೀಕ್ಷೆ ಅಥವಾ ಲಿಖಿತ ಪರೀಕ್ಷೆಗಳನ್ನು ನಡೆಸುವುದು ಅನಾವಶ್ಯಕ. ಈ ರೀತಿ ಸಾವಿರಾರು ವಿದ್ಯಾರ್ಥಿಗಳನ್ನು ಕರೆದು ಇಂಥ ಪರೀಕ್ಷೆಗಳನ್ನು ಮಾಡಿ ಅರ್ಹತೆ ಇರುವ ವಿದ್ಯಾರ್ಥಿಗಳನ್ನು ಏತಕ್ಕೆ ಎಲಿಮಿನೇಟ್ ಮಾಡುತ್ತಿದ್ದೀರಿ ? ದಯವಿಟ್ಟು ಇಂಥ ಪರೀಕ್ಷೆಗಳನ್ನು ಮಾಡುವುದನ್ನು ಮೊದಲು ನಿಲ್ಲಿಸಬೇಕು

ಇನ್ನು ಎರಡನೆಯದಾಗಿ ಈ ಬೆಂಗಳೂರಿನಲ್ಲಿ ಹೆಚ್ಚು ಕೈಗಾರಿಕೆಗಳನ್ನು ಬೆಳೆಸುವ ಸಲುವಾಗಿ ಕೇಂದ್ರಸರ್ಕಾರದ ಆರ್ಥಿಕ ಸಚಿವರು ಇಲ್ಲಿಗೆ ಬಂದಿದ್ದಾಗ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಕೈಗಾರಿಕೆಗಳು ಹೆಚ್ಚಾದಂತೆಲ್ಲಾ ಕೈಗಾರಿಕಾ ತರಬೇತಿಯನ್ನು ಹೊಂದಿದ ಅಭ್ಯರ್ಥಿಗಳೂ ಹೆಚ್ಚಾಗಿ ಬೇಕಾಗುತ್ತದೆ. ಕಳೆದ ೫–೬ ವರ್ಷಗಳಿಂದ ಬೆಂಗಳೂರು ತರಬೇತಿ ಕೇಂದ್ರದಲ್ಲಿ ಹೆಚ್ಚುವರಿ ತರಗತಿಗಳನ್ನು ಮಾಡುತ್ತಿಲ್ಲ ತರಬೇತಿ ಹೊಂದಿದ ಅಭ್ಯರ್ಥಿಗಳ ಕೊರತೆಯನ್ನು ನೀಗಿಸಬೇಕಾದರೆ ಈ ಬೆಂಗಳೂರು ನಗರದಲ್ಲಿ ಇನ್ನೂ ೪–೫ ತರಬೇತಿ ಕೇಂದ್ರಗಳನ್ನು ಪ್ರಾರಂಭಮಾಡಬೇಕಾಗುತ್ತದೆ. ಇದನ್ನು ತಾವು ಮಾಡುತ್ತೀರಾ

ಶ್ರೀ ಎ. ಬಿ. ಜಕನೂರು.—ಮೊದಲಿನಿಂದಲೂ ನಾವು ಈ ಪದ್ಧತಿಯನ್ನೇ ಅನುಸರಿಸಿಕೊಂಡು ಬರುತ್ತಿದ್ದೇವೆ. ಈಗ ಅಭ್ಯರ್ಥಿಗಳ ಆಯ್ಕೆಯಾಗುತ್ತಿದೆ. ಈ ಹಂತದಲ್ಲಿ ಈ ಪದ್ಧತಿಯನ್ನು ನಾವು

ಕೈ ಬಿಟ್ಟರೆ ಬಹಳ ಗೊಂದಲವಾಗುತ್ತದೆ. ಆದ್ದರಿಂದ ಕೇವಲ ಮೆರಿಟ್ ಮೇಲೆ ಅಭ್ಯರ್ಥಿಗಳನ್ನು ತೆಗೆದು ಕೊಳ್ಳಬೇಕೆಂದು ಮಾನ್ಯ ಸದಸ್ಯರು ಏನು ಸೂಚನೆ ಮಾಡುತ್ತಿದ್ದಾರೆ ಅದನ್ನು ನಾನು ಪರಿಶೀಲಿಸುತ್ತೇನೆ.

ಇನ್ನು ಎರಡನೆಯದಾಗಿ ಐ.ಟಿ.ಐ. ಸಂಸ್ಥೆಗಳನ್ನು ಇನ್ನೂ ಹೆಚ್ಚಿಗೆ ಸ್ಥಾಪನೆ ಮಾಡಬೇಕೆಂದು ಏನು ಹೇಳುತ್ತಿದ್ದಾರೆ ಅದರ ಅವಶ್ಯಕತೆ ಇದೆ ಎಂಬುದು ನಮಗೂ ಗೊತ್ತಿದೆ. ಆದರೆ ಆರ್ಥಿಕ ತೊಂದರೆಯಿಂದಾಗಿ ಇದನ್ನು ಮಾಡುವುದಕ್ಕಾಗುತ್ತಿಲ್ಲ. ಆದರೂ ಮಾನ್ಯ ಸದಸ್ಯರ ಸೂಚನೆಯನ್ನು ಸರ್ಕಾರ ಪರಿಶೀಲಿಸುತ್ತದೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಈಗ ಆಗುತ್ತಿರತಕ್ಕ ತೊಂದರೆಗಳನ್ನು ಬಿಟ್ಟು ಮುಂದಿನ ವರ್ಷದಿಂದ ಇದನ್ನು ಪರಿಶೀಲಿಸುವುದಾದರೆ ಬಹಳ ಕಷ್ಟವಾಗುತ್ತದೆ. ಮೆರಿಟ್ ಕ್ಯಾಂಡಿಡೇಟ್ಸ್‌ನ್ನು ಎಲಿಮಿನೇಟ್ ಮಾಡತಕ್ಕ ಪ್ರವೃತ್ತಿ ಈಗ ನಡೆಯುತ್ತಿದೆ, ಇನ್ನೂ ಅಂತಿಮವಾಗಿ ಆಯ್ಕೆ ಕಾರ್ಯ ವಂಗಿದಿಲ್ಲ. ಆದ್ದರಿಂದ ಯಾವ ತೊಂದರೆಯೂ ಆಗುವುದಿಲ್ಲ, ನಾವು ದಯವಿಟ್ಟು ಈ ವರ್ಷದಿಂದಲೇ ಈ ನೀತಿಯನ್ನು ಜಾರಿಗೆ ತನ್ನಿ. ಈ ವರ್ಷ ಮೆರಿಟ್ ಮೇಲೆ ಸೀಟುಗಳನ್ನು ಕೊಟ್ಟು ಮುಂದಿನ ವರ್ಷದಿಂದ ಕಂಪ್ಯೂಟರೈಸೇಷನ್ ಮಾಡಿ. ಐ.ಟಿ.ಐ.ಗೆ ಹೋಗುವವರು ಸಾಮಾನ್ಯವಾಗಿ ಕಾರ್ಮಿಕರ ಮತ್ತು ರೈತರ ಮಕ್ಕಳು. ಅಂಥ ಮಕ್ಕಳಿಗೆ ತೊಂದರೆಯಾಗುವಂಥ ಈ ಪದ್ಧತಿಯನ್ನು ಏತಕ್ಕೆ ಇಟ್ಟು ಕೊಂಡಿದ್ದೀರಿ ? ದಯವಿಟ್ಟು ನಾನು ಹೇಳಿದಂತೆ ಮಾಡಿ.

ಶ್ರೀ ಎ. ಬಿ ಜಕನೂರು,— ಈಗಾಗಲೇ ಪ್ರೋಸಸ್ ಶುರುವಾಗಿದೆ. ಆಯ್ಕೆ ಕಾರ್ಯ ಮುಂಗಿದಿದೆ, ಈ ಹಂತದಲ್ಲಿ ನಾವು ಈ ಪದ್ಧತಿಯನ್ನು ರದ್ದು ಮಾಡಿದರೆ ಬಹಳ ತೊಂದರೆಯಾಗುತ್ತದೆ, ಏಕೆಂದರೆ ಆಯ್ಕೆಯಾಗಿರುವವರು ಕೋರ್ಟಿಗೆ ಹೋಗುತ್ತಾರೆ. ಆದ್ದರಿಂದ ನೀವು ಹೇಳಿದಂತೆ ಮಾಡುವು ದಕ್ಕಾಗುವುದಿಲ್ಲ. ಆದರೆ ಮುಂದಿನ ವರ್ಷದಿಂದ ನಾವು ಯಾವ ನೀತಿಯನ್ನು ಅನುಸರಿಸಬೇಕೆಂಬುದನ್ನು ಪರಿಶೀಲಿಸುತ್ತೇವೆ.

ಶ್ರೀ ಹೆಚ್ ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾ ಐ.ಟಿ.ಐ. ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಬೇಕಾದ ಅವಶ್ಯಕತೆ ಇದೆಯೆಂದು ಒಪ್ಪಿಕೊಂಡಿದ್ದಾರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಹೆಚ್ಚು ಬೆಳೆಯುತ್ತಿವೆ. ಅವರಿಗೆ ಇನ್‌ಸೆಂಟಿವ್ಸ್ ಕೊಡುತ್ತಿದ್ದೇವೆ, ೧೧ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನ್ನು ಪ್ರತಿದಿನ ಮುಂಜೂರು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ಹಿಂದೆಯೇ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೆ. ಖಾಸಗಿ ಸಂಸ್ಥೆಯವರು ಐ.ಟಿ ಐ ಕೇಂದ್ರ ಗಳನ್ನು ತೆರೆಯುವುದಕ್ಕೆ ಮುಂದೆ ಬರುತ್ತಿದ್ದಾರೆ, ಅವರಿಗೆ ನೀವು ಗ್ಯಾರಂಟಿ ಕೊಡಬೇಕು. ಈಗಾಗಲೇ ಬೆಂಗಳೂರು ನಗರದಲ್ಲಿ ೨-೩ ಜನರು ಪ್ರಾರಂಭ ಮಾಡಿದ್ದಾರೆ. ಈಗ ತಾವು ಕೇಂದ್ರ ಸರ್ಕಾರದ ಜೊತೆ ಮತ್ತು ಕೈಗಾರಿಕಾ ಖಾತೆಯ ಸಚಿವರ ಜೊತೆ ಸಮಲೋಚನೆ ಮಾಡಿ ಐ.ಟಿ.ಐ. ಕೇಂದ್ರಗಳನ್ನು ಪ್ರಾರಂಭ ಮಾಡಲು ಮುಂದೆ ಬರತಕ್ಕ ಖಾಸಗಿಯವರಿಗೆ ತಾವು ಗ್ಯಾರಂಟಿ ಕೊಡುವುದಾದರೆ ಸರ್ಕಾರಕ್ಕೆ ಹೆಚ್ಚಿನ ಖರ್ಚು ಬರುವುದಿಲ್ಲ. ಅಲ್ಲದೆ ಮೈಸೂರು, ಹುಬ್ಬಳ್ಳಿ, ಧಾರವಾಡ, ಮಡಕೇರಿ ಮುಂತಾದ ಜಿಲ್ಲೆಗಳಲ್ಲೂ ಕೈಗಾರಿಕೆಗಳು ಬರುವುದಕ್ಕೆ ಅನುಕೂಲವಾಗುತ್ತದೆ ಈ ಕೇಂದ್ರವನ್ನು ಸಂಪೂರ್ಣವಾಗಿ ನಮ್ಮ ಸರ್ಕಾರದವರೇ ನಡೆಸುವುದಕ್ಕೆ ಆರ್ಥಿಕ ತೊಂದರೆ ಇರುವುದರಿಂದ ಇದರಲ್ಲಿ ಅರ್ಧದಷ್ಟು ಗ್ಯಾರಂಟಿ ಕೊಟ್ಟರೆ ಖಾಸಗಿಯವರೇ ಮುಂದೆ ಬರುತ್ತಾರೆ. ಆದ್ದರಿಂದ ಇದನ್ನು ಪರಿಶೀಲಿಸುತ್ತೀರಾ ?

ಶ್ರೀ ಎ. ಬಿ. ಜಕನೂರು.—ಕಳೆದಸಾರಿ ಚಿಕ್ಕಮಗಳೂರಿನಲ್ಲಿ ಮತ್ತು ಮಂಡ್ಯದಲ್ಲಿ ಒಂದೊಂದು ತರಬೇತಿ ಕೇಂದ್ರಗಳಿಗೆ ಮುಂಜೂರಾತಿ ನೀಡಿದ್ದೇವೆ. ಬೆಂಗಳೂರಿನಲ್ಲಿ ಇನ್ನೂ ಹೆಚ್ಚಿಗೆ ತೆರೆಯ ಬೇಕೆಂದರೂ ಸಾಧ್ಯವಾಗುತ್ತಿಲ್ಲ. ಈಗ ಖಾಸಗಿಯವರು ಏನು ಪ್ರಾರಂಭ ಮಾಡಿದ್ದಾರೆ ಅವರಿಗೆ ಗ್ಯಾರಂಟಿ ಕೊಡುವ ಯೋಚನೆಯನ್ನು ನಾವು ಪರಿಶೀಲಿಸಬೇಕಾಗುತ್ತದೆ. ಏನೇ ಆದರೂ ನಾವು ಕೇಂದ್ರ ಸರ್ಕಾರದವರ ಪಾಲಿಸಿಯನ್ನು ಅನುಸರಿಸಬೇಕಾಗಿದೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.— ಅವರಲ್ಲಿ ಯಾರಾದರೂ ಕೋರ್ಟಿಗೆ ಹೋಗಿ ಸ್ಟೇ ತರಬಹು ದೆಂದು ತಾವು ಹೇಳಿದಿರಿ. ಆದರೆ ನಾನು ಕೇಳುತ್ತಿರುವುದು ಈಗ ಅವರು ಮಾಡುತ್ತಿರುವ ರಿಟನ್ ಎಕ್ಸಾಮಿನೇಷನ್ ಮತ್ತು ಓರಲ್ ಎಕ್ಸಾಮಿನೇಷನ್‌ನ್ನು ರದ್ದು ಮಾಡಿ ಮೆರಿಟ್ ಮೇಲೆ ಸೀಟುಗಳನ್ನು ಏತಕ್ಕೆ ಕೊಡಬಾರದು ಎಂದು. ಇದರಿಂದ ಏನು ತೊಂದರೆಯಾಗುತ್ತದೆ?

೧೧-೦೦ ಎ. ಎಂ.

ಅಧ್ಯಕ್ಷರು.—ಫೈನ್‌ಲೈಸ್ ಆಗಿರುವುದರಿಂದ ಮತ್ತೆ ಸೇರಿಸಲು ಬರುವುದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಶ್ರೀ ಬಿ. ವಿ ರಾಮಚಂದ್ರ ರೆಡ್ಡಿ.— ಮಾನ್ಯ ಅಧ್ಯಕ್ಷರೇ, ಇನ್ನೂ ಫೈನಲೈಸ್ ಆಗಿಲ್ಲ. ಏನೂ ಪ್ರೊಗ್ರೆಸ್ ಕೂಡ ಇಲ್ಲ. ಫೈನಲೈಸ್ ಆಗಿದ್ದರೆ ತೊಂದರೆ ಏನು ಎನ್ನುವುದು ಸರ್ಕಾರಕ್ಕೆ ಅರ್ಥವಾಗುತ್ತಿತ್ತು.

ಶ್ರೀ ಎ. ಬಿ. ಜಕನೂರ್.— ಮಾನ್ಯ ಅಧ್ಯಕ್ಷರೇ, ಎಕ್ಸಾಮಿನೇಷನ್ಸ್ ಈಗಾಗಲೇ ಕಂಡೆಕ್ಟ್ ಮಾಡಿರುವುದರಿಂದ ಮತ್ತೆ ಮಾಡಲಿಕ್ಕೆ ಬರುವುದಿಲ್ಲ.

MR. SPEAKER — The hon. Member was making a very serious point. ೬೮ ನಂಬರ್ ಮೇಲೆ ಬಂದಿರುವವರಿಗೆ ೪೦, ೪೦ ನಂಬರ್ ಬಂದಿರುವವರಿಗೆ ೩೦ ನಂಬರ್ ಬಂದಿರುತ್ತದೆ ಎಂದು ಹೇಳುತ್ತಾರೆ.

SRI A.B. JAKANUR —That will be looked into. Moreover there are Committees consisting of non-official Members also.

MR. SPEAKER.— Hon. Member Sri Ramachandra Reddy, you can discuss with the hon. Minister afterwards.

(iii) ENHANCEMENT OF THE HOUSE RATES CONSTRUCTED IN BEERANAHALLI TANK AREA, HASSAN CITY UNDER HUDCO SCHEME

SRI K. H. HANUME GOWDA.— Sir, I call the attention of the hon. Minister for Housing and Urban Development regarding the Karnataka Housing Board for having arbitrarily and abruptly enhanced the House rates constructed in Beeranahally Tank area, Hassan City, under HUDCO Scheme and caused hardship to Higher Income Group, MIG. and LIG.

SRI DHARAM SINGH (Minister for Housing and Urban Development) — Sir, I wish to make the following statement.

The Housing Scheme for the construction of 500 EWS Houses. 240 LIG Houses, 80 MIG. Houses, and formation of 10 LIG 40 MIG, 80 HIGH sites and 40 Shops was prepared by the Karnataka Housing Board with HUDCO assistance during 1972-73 This Scheme was sanctioned in December 1973 as per stripulations of the HUDCO and the work was actually started in July 1975 after observing necessary formalities.

As per the Notification issued by the Karnataka Housing Board, the cost of MIG. House was to be Rs. 34,500 LIG. House Rs 19,000 and EWS. House Rs. 9,500 plus interest in all cases.

The work was scheduled to be taken up in three phases. Ist Phase 270, II Phase 275 and III Phase 275. In respect of the I Stage the Contractor backed out after sometime. Lateron, during